# 44

# ನೀ ಒಪ್ಪಲಾರದ ಸ್ಥಿತಿಗೆ ಬಾರದೆ ಇರುವಾಗ

# (15:35-41)

ಅಪೊಸ್ತಲರ ಕೃತ್ಯಗಳು 15ರ ಅಂತ್ಯದಲ್ಲಿ ಒಂದು ತಲ್ಲಣವನ್ನು ನೋಡುತ್ತೇವೆ. ಈ ಅಧ್ಯಾಯದಲ್ಲಿ, ಉಂಟಾದ ಭಿನ್ನಾಭಿಪ್ರಾಯವನ್ನು ಶಮನ ಮಾಡಲು ಪೌಲ ಬಾರ್ನಬರು ಅತಿಪ್ರಯತ್ನ ಮಾಡಿದರು, ಸಭೆಯು ವಿಭಾಗವಾಗದಂತೆ ಗಮನ ನೀಡಿದರು. ತರುವಾಯ ಅಂತ್ಯದ ವಚನಗಳಲ್ಲಿ, ಪೌಲ ಬಾರ್ನಬರು ತಮ್ಮಲ್ಲಿ ಉಂಟಾದ ಭಿನ್ನಾಭಿಪ್ರಾಯಗಳನ್ನು ಶಮನ ಪಡಿಸಿಕೊಳ್ಳಲು ಸಾಧ್ಯವಾಗದೆ ಇರುವಾಗ - ಅವರು ಬೇರೆ ತಂಡವಾಗಿ ಪ್ರತ್ಯೇಕಗೊಂಡರು!

ನಾನು ಲೂಕನ ಸ್ಥಾನದಲ್ಲಿದ್ದಿದ್ದರೆ, ಪೌಲ ಬಾರ್ನಬರ "ತೀಕ್ಷ್ಣವಾದ ವಿವಾದದ" ಕುರಿತು ದಾಖಲಿಸುತ್ತಿರಲಿಲ್ಲ. ಈಗಾಗಲೇ ಸಂಧಿಸಿದ್ದ ಸ್ಥಳಗಳನ್ನು ಪುನಃ ಸಂಧಿಸಿ ಅವರನ್ನು ದುಪ್ಪಟ್ಟಾಗಿ ಆಶೀರ್ವದಿಸುವ ಕಾರಣದಿಂದ, ಎರಡು ಗುಂಪುಗಳಾಗಿ ಹೋದರು ಎಂದು ತಿಳಿಸುತ್ತಿದ್ದೆ. ಆದರೆ ಒಂದು ತಂಡದ ಬದಲು, ಅವರು ಎರಡು ತಂಡಗಳನ್ನು ಮಾಡಿಕೊಂಡರು. ಆದರೆ ಲೂಕನು ಈ ವಿಧದ ದಾಖಲೆಯನ್ನು ಮಾಡಲು ನಿರಾಕರಿಸಿರುವನು. ಸತ್ಯವೇದದ - ನಾಯಕ ಜನರು, ಹೇಗೆ ಇರಬಹುದಾಗಿತ್ತು ಎಂದು ತಿಳಿಸದೆ - ಅವರು ಇದ್ದ ಪರಿಸ್ಥಿತಿಯನ್ನು ಯಥಾರ್ಥವಾಗಿ ದಾಖಲು ಮಾಡಲಾಗಿದೆ.

ಪೌಲ ಬಾರ್ನಬರ ನಡುವೆ ಉಂಟಾದ ವಾದವನ್ನು ಲೂಕನು ಏಕೆ ದಾಖಲು ಮಾಡಿದನು? ನಿಶ್ಚಯವಾಗಿಯೂ, ಅವರನ್ನು ನಾಚಿಕೆ ಪಡಿಸುವ ಕಾರಣವಲ್ಲ,[1] ಆದರೆ ಈ ವಿಧವಾದ ಭಿನ್ನಾಭಿಪ್ರಾಯಗಳನ್ನು ಶಮನ ಪಡಿಸುವ ವಿಧನಾವನ್ನು ಸಹೋದರರು ಅರಿಯಬೇಕೆಂದು ದಾಖಲುಮಾಡಿರುವನು. ಈ ಹಿಂದಿನ ಎರಡು ಬೋಧನೆಗಳಲ್ಲಿ ಸಭೆಯ ಸಮಸ್ಯೆಯ ಕುರಿತು ಚರ್ಚಿಸಿದ್ದೆವು. ಕೆಲವು ಸಾರಿ ಅಂಥವುಗಳನ್ನು ಶಮನ ಮಾಡದ ಪರಿಸ್ಥಿತಿಗೆ ಬರುತ್ತೇವೆ. ಆಗ ನಾವು ಏನು ಮಾಡಬಲ್ಲೆವು? ಕೆಲವು ಉತ್ತರಗಳನ್ನು ನಮ್ಮ ಪಾಠಗಳಿಂದ ಅರಿತುಕೊಳ್ಳೋಣ.

## ತೀಕ್ಷ್ಣ ವಾಗ್ವಾದ

**ಅಭಿಪ್ರಾಯವನ್ನು ನೀಡಲಾಯಿತು (15:35, 36)**

ಕಥೆಯನ್ನು ನೆನಪು ಮಾಡಿಕೊಂಡು ನಾವು ಪಾಠವನ್ನು ಆರಂಭಿಸೋಣ. 15:35ರ ವಾಕ್ಯದಿಂದ, ನಮ್ಮ ಹಿಂದಿನ ಪಾಠವು ಅಂತ್ಯಗೊಂಡಿತು. "ಆದರೆ ಪೌಲನೂ ಬಾರ್ನಬನೂ ಅಂತಿಯೋಕ್ಯದಲ್ಲಿಯೇ ನಿಂತು ಬೇರೆ ಅನೇಕರೊಂದಿಗೆ ಉಪದೇಶಮಾಡುತ್ತಾ ಕರ್ತನ ವಾಕ್ಯವೆಂಬ ಸುವಾರ್ತೆಯನ್ನು ಸಾರುತ್ತ ಇದ್ದರು." ಯೆರೂಸಲೇಮಿನ ಸಭೆಯ ನಂತರ ಅಂತಿಯೋಕ್ಯದಲ್ಲಿ ಅವರು ಎಷ್ಟು ಕಾಲ ತಂಗಿದರು ಎಂಬುದು ಸ್ಪಷ್ಟವಾಗಿರುವದಿಲ್ಲ. ಒಂದು ವೇಳೆ ಪೌಲನು ಈ ಸಮಯದಲ್ಲಿಯೇ ಗಲಾತ್ಯ[2] ಪತ್ರಿಕೆಯನ್ನು ಬರೆದಿರುವ ಸಾಧ್ಯತೆಯಿದೆ ಗಲಾತ್ಯ 2:11-16ರಲ್ಲಿನ ಘಟನೆಯಲ್ಲಿ - ಪೇತ್ರನು, ಸಹೋದರರ ಪಂಕ್ತಿಯಲ್ಲಿ[3] ಊಟಮಾಡುವಾಗ, ಸುನ್ನತಿಯವರಿಗೆ ಭಯಪಟ್ಟು ತನ್ನನ್ನು ಪ್ರತ್ಯೇಕ ಮಾಡಿಕೊಂಡಾಗ, ಪೌಲನು ಅವನನ್ನು ಗದರಿಸಿದನು ಈ ಘಟನೆಯು ಸಹ ಇದೇ ಸಮಯದಲ್ಲಿ ಜರುಗಿರಬಹುದು. ಗಲಾತ್ಯ 2 ನಮಗೆ ಅಧ್ಯಯದ ಪ್ರಮುಖ ಭಾಗವಾಗಿದೆ: "ಇದಲ್ಲದೆ ಮಿಕ್ಕಾದ ಯೆಹೂದ್ಯರೂ

ಅವನೊಂದಿಗೆ ಸೇರಿ ಹಾಗೆಯೇ ಕಪಟಮಾಡಿದರು; ಹೀಗೆ *ಬಾರ್ನಬನೂ* ಅವರ ಕಪಟದ ಸೆಳವಿಗೆ ಬಿದ್ದನು" (ಗಲಾತ್ಯ 2:13; ಒತ್ತಿ ಹೇಳಿದ್ದು ನನ್ನದು). ಬಾರ್ನಬನ ವರ್ತನೆಯ ಬಗ್ಗೆ ಪೌಲನಿಗೆ ಬೇಸರವಾಗಿರಬಹುದು - ಆಳ ವಾದ ಸಂಕಟವಾಗಿರಬಹುದು. ಎಂಬುದನ್ನು ನಾವು ಅಪೊಸ್ತಲರ ಕೃತ್ಯಗಳು 15:36-39 ರಲ್ಲಿ ನೋಡುತ್ತೇವೆ ಈ ಘಟನೆಯ ಹಿಂದೆಯೇ ಪೌಲ ಬಾರ್ನಬರ ನಡುವೆ ಹಂದರ ಉಂಟಾಗಿತ್ತು.

ಕೆಲವು ಕಾಲ ಅವರಿಬ್ಬರು ಅಂತಿಯೋಕ್ಯದಲ್ಲಿ ಕೆಲಸ ಮಾಡಿದ ನಂತರ, ಪೌಲನು ಸೇವೆಯನ್ನು ಮುಂದುವರಿಸುವದು ಉತ್ತಮವೆಂದು ತಿಳಿದನು. "ಕೆಲವು ದಿವಸಗಳಾದ ಮೇಲೆ ಪೌಲನು ಬಾರ್ನಬನಿಗೆ - ನಾವು ಕರ್ತನ ವಾಕ್ಯವನ್ನು ಸಾರಿದ ಎಲ್ಲಾ ಊರುಗಳಿಗೆ ತಿರಿಗಿ ಹೋಗಿ ಅಲ್ಲಿರುವ ಸಹೋದರರು ಹೇಗಿದ್ದಾರೆಂದು ನೋಡೋಣ ಬಾ ಅಂದನು" (15:36). ನಾವು ಜನರಿಗೆ ದೀಕ್ಷಾಸ್ನಾನ ಮಾಡಿಸಿದ ನಂತರ, ಅವರನ್ನು ಅಲಕ್ಷ್ಯ ಮಾಡಬಾರದು: "ಹೊಸ ಕ್ರೈಸ್ತರನ್ನು ವೃದ್ಧಿ ಮಾಡದ ಹೊರತು ಸುವಾರ್ತೆಯನ್ನು ಮುಂದುವರಿಸಬಾರದೆಂದು ಮಹಾ ಆದೇಶವು ತಿಳಿಸುತ್ತದೆ."[4] ಈ ಹಿಂದೆ ಸೇವೆ ಮಾಡಿದ್ದ ಸೇವಕರುಗಳು, ತಾವು ಸೇವೆ ಮಾಡಿದ ಸ್ಥಳಕ್ಕೆ ಹಿಂತಿರುಗಿ, ಅಲ್ಲಿದ ದೇವಜನರನ್ನು ಪೋಷಣೆ ಮಾಡಿದರು.

ಸ್ಥಾಪನೆಗೊಂಡಿದ್ದ ಸಭೆಗಳನ್ನು ಭಲಪಡಿಸುವುದೇ ಪೌಲನ ಧ್ಯೇಯವಾಗಿತ್ತು (ಎಂದು ತಿಳಿಸಲ್ಪಟ್ಟಿದೆ) ಯೊಹೂದ ಉಪದೇಶಕರ ಕುರಿತು ಪೌಲನು ಚಿಂತನೆ ಮಾಡಿದನು ಎಂದು ಗಲಾತ್ಯ ಪತ್ರಿಕೆ ತಿಳಿಸುತ್ತದೆ, ಯಾಕೆಂದರೆ ಆ ಸಭೆಯಲ್ಲಿ ಕೆಲವರು ಗೊಂದಲ ಸೃಷ್ಟಿಸಿದ್ದರು. ಆ ಪ್ರೋತ್ಸಾಹದ ಪ್ರಯಾಣವು ಗುರುತರವಾದ ಸುವಾರ್ತೆಗೆ ನಾಂದಿಯಾಯಿತು.

**ಸಂಘರ್ಷ ಅಧಿಕವಾಯಿತು (15:37-39ಎ)**

ಬಾರ್ನಬನು ಪೌಲನ ಸಲಹೆಗಳಿಗೆ ಮನ್ನಣೆ ಮಾಡಿದ್ದರೂ, ತನ್ನದೆ ಆದ ಅಭಿಪ್ರಾಯಗಳನ್ನು ಹೊಂದಿದ್ದನು: "ಬಾರ್ನಬನು ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು ತಮ್ಮ ಸಂಗಡ ಕರೆದುಕೊಂಡು ಹೋಗಬೇಕೆಂದು ಇದ್ದಾಗ" (ವಚನ 37). ಅವನು ಬಾರ್ನಬನ ಚಿಕ್ಕಪ್ಪನ ಮಗನಾಗಿದ್ದನು, ಎಂಬದನ್ನು ನೆನಪು ಮಾಡಿಕೊಳ್ಳಿರಿ (ಕೊಲೊಸ್ಸೆ 4:10), ಅವನು ಅವರ ಪ್ರಥಮ ಸೇವಾ ಪ್ರಯಾಣದಲ್ಲಿ, ಅವರಿಗೆ ಸಹಕರಿಸಿದನು, ಅವನು ಪಾಫೋಸೂರಿನ ಪೆರ್ಗೆಗೆ ಹಿಂದಿರುಗಿದ್ದನು (13:13).

ಅವರ ಸೇವೆಯ ಎರಡನೆಯ ಪ್ರಯಾಣದಲ್ಲಿ ಬಾರ್ನಬನು ಮಾರ್ಕನನ್ನು ತಮ್ಮೊಂದಿಗೆ ಕರೆದೊಯ್ಯುವ ಉದ್ದೇಶವೇನಾಗಿತ್ತು? ಒಂದು ವೇಳೆ ಮಾರ್ಕನು ಮಾನಸಾಂತರದಿಂದ ಬಾರ್ನಬನಲ್ಲಿಗೆ ಬಂದಿರಬಹುದು.

ಈ ಕಾರಣದಿಂದ, "ಪೌಲನು ನಮ್ಮೊಂದಿಗೆ ಕೆಲಸಕ್ಕೆ ಬಾರದೆ. ಪಂಫುಲ್ಯದಲ್ಲಿ ನಮ್ಮನ್ನು ಬಿಟ್ಟವನನ್ನು ಕರೆದುಕೊಂಡು ಹೋಗುವದು ತಕ್ಕದಲ್ಲವೆಂದು ನೆನಸಿದನು" (15:38). ಆದಾಗ್ಯೂ ಮಾರ್ಕನು, "ನಾನು ತಪ್ಪುಮಾಡಿದೆನು," ನಾನು ಹಿಂದಿರುಗ ಬಾರದಿತ್ತು, ನನಗೆ ಎರಡನೆಯ ಅವಕಾಶ ನೀಡುವುದಾದರೆ, ನಿಮಗೆ ನಿರಾಶೆ ತರುವದಿಲ್ಲ ಎಂದು ಹೇಳಿರಬಹುದು; ಅದಾಗ್ಯೂ ಉತ್ತೇಜನದ ಮಗನಾದ ಬಾರ್ನನು ಅವನಿಗೆ ಇನ್ನೊಂದು ಅವಕಾಶವನ್ನು ನೀಡಲು ಮುಂದಾದನು.[5] ಆದರೆ ಪೌಲನು ಅವನನ್ನು ಕರೆದುಕೊಂಡು ಹೋಗಬಾರದೆಂದು ಹೇಳುವಾಗ, ಬಾರ್ನಬನು ಅವನನ್ನು ಕರೆದುಕೊಂಡು ಹೋಗಬೇಕೆಂದು ಒತ್ತಾಯ ಪಡಿಸುತ್ತಿದ್ದನು. ಅಲ್ಲಿ ಉಂಟಾದ ಸಂಭಾಷಣೆಯ ಬದಲಾವಣೆಯನ್ನು ನಾವು ಕಾಣದೆ ಹೋದರೂ, ಊಹಿಸಲು ಸಾಧ್ಯವಿದೆ:[6]

ಬಾರ್ನಬ: "ನಾವು ಮಾರ್ಕನಿಗೆ ನಿಜವಾಗಲೂ ಒಂದು ಅವಕಾಶವನ್ನು ನೀಡಲೇ ಬೇಕು."

ಪೌಲ: "ಇಲ್ಲಿ ಕರ್ತನ ಮಾತೇನೆಂದರೆ, ಯಾವನಾದರೂ, ನೇಗಿಲಿನ ಮೇಲೆ ತನ್ನ

ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು" [ಲೂಕ 9:62[7]].

ಬಾರ್ನಬ: "ಕರುಣೆಯುಳ್ಳವರು, ಧನ್ಯರು ಅವರು ಕರುಣೆ ಹೊಂದುವರು [ಮತ್ತಾಯ 5:7]."

ಪೌಲ: "ಈ ಪ್ರಯಾಣವು ಪ್ರಯಾಸವುಳ್ಳದ್ದು, ನಾವು ನಮ್ಮ ಸಂಗಡಿಗರನ್ನೇ ಅವಲಂಭಿಸಬೇಕು ವಿವೇಕಿಯು ಹೇಳಿದಂತೆ, ಕಷ್ಟಕಾಲದಲ್ಲಿ ದ್ರೋಹಿಯಲ್ಲಿರುವ ನಂಬಿಕೆಯು ಮುರುಕು ಹಲ್ಲು, ಜಾರುವ ಕಾಲು [ಜ್ಞಾನೋಕ್ತಿ 25:19]."

ಬಾರ್ನಬ: "ನಾನು ವಾಕ್ಯಾಧಾರವನ್ನು ನೀಡುವುದಾದರೆ[8] ದಾವೀದನ ಮತ್ತು ಯೋನಾತಾನನ ನಿದರ್ಶವನ್ನು ಮರೆಯ ಬೇಡ. ದೇಲರೇ ಜನರಿಗೆ ಎರಡನೆಯ ಅವಕಾಶವನ್ನು ನೀಡಿರುವಾಗ, ನಾವೇಕೆ ನೀಡಬಾರದು?"

ಪೌಲ: "ಅವನು ನಿನ್ನ ಚಿಕ್ಕಪ್ಪನ ಮಗನಾಗದೇ ಇದ್ದಿದ್ದರೆ ನೀನು ಅವನಿಗೆ ಅವಕಾಶ ನೀಡುತ್ತಿರಲಿಲ್ಲ!"

ಬಾರ್ನಬ: "ನೀನು ನನ್ನ ಚಿಕ್ಕಪ್ಪನ ಮಗನಾಗದೇ ಇದ್ದರೂ ಯೆರೂಸಲೇಮಿನಲ್ಲಿ[9] ನಿನ್ನ ಪರವಾಗಿ ನಿಂತುಕೊಂಡೆ - ಅದನ್ನು ನೆನಪಿಸಿಕೋ?"

ವಚನ 39ರಲ್ಲಿ "ಈ ವಿಷಯದಲ್ಲಿ *ತೀಕ್ಷ್ಣ* ವಾಗ್ವಾದವುಂಟಾಯಿತು ..." (ಒತ್ತಿ ಹೇಳಿದ್ದು ನನ್ನದು.) ತೀಕ್ಷ್ಣ ಎಂದರೆ "ಕೋಪದ ವಾತಾವರಣ"[10] RSV "ಅಭಿಪ್ರಾಯಗಳ ಕುರಿತಾದ"[11] ಗ್ರೀಕ್ ಮತ್ತು ಇಂಗ್ಲಿಷ್ ಭಾಷೆಯಲ್ಲೂ "ಮಾತಿನ ಚಕಮಕಿ" - ಬಹುಶಃ ಕೋಪ ವನ್ನು ಕಳೆದು ಕೊಳ್ಳುವದು, ಗಟ್ಟಿಯಾಗಿ ಮಾತನಾಡುವದು. ಪೌಲನು ನಂತರ ಬರೆದು, "ಪ್ರೀತಿಯು ತಾಳ್ಮೆಯುಳ್ಳದ್ದು, ... ಮತ್ತು ... ಪ್ರೀತಿಯು ಸಿಟ್ಟುಗೊಳ್ಳುವದಿಲ್ಲ, ..." (1 ಕೊರಿಂಥ 13:4, 5) ಪೌಲನು ಈ ಮಾತುಗಳನ್ನು ಕಷ್ಟದಿಂದಲೇ ಹೇಳಿರಬಹುದು, ಬಾರ್ನಬನೊಂದಿಗಿದ್ದ ಪ್ರೀತಿಯ ಸಂಬಂಧವನ್ನು ನೆನಪು ಮಾಡಿರಬಹುದು, ಆದರೆ ಈ ಸಂದರ್ಭದಲ್ಲಿ ಮಾತ್ರ ಕೋಪಗೊಂಡಿರಬಹುದು!

### ಪರಿಹಾರವನ್ನು ಕಂಡು ಹಿಡಿಯಲಾಯಿತು (15:39ಬಿ-41)

ಕೆಲ ಕಾಲದ ನಂತರ, ಪೌಲ ಬಾರ್ನಬರು ತಮ್ಮಲ್ಲಿದ್ದ ವ್ಯಾತ್ಯಾಸಗಳನ್ನು ಪರಿಹರಿಸಿ ಕೊಳ್ಳಲು ಸಾಧ್ಯವಾಗದೆ ಇರಬಹುದು - ಆದರೆ ಈ ಸಮಯದಲ್ಲಿ, ಅವರು ಎರಡು ಗುಂಪುಗ ಳಾಗಿ, ಈಗಾಗಲೇ ಸೇವೆ ಮಾಡಿದ್ದ ಸ್ಥಳಗಳನ್ನು ಸಂಧಿಸಲು ನಿರ್ಣಯಿಸಿದ್ದರು. ಬಾರ್ನಬನು ಕುಪ್ರದವನಾಗಿದ್ದರಿಂದ (4:36), ಅವನು ಅಲ್ಲಿದ್ದ ಕೆಲಸವನ್ನು ಮುಂದುವರಿಸಿದನು,[12] ಪೌಲನು ಆಸ್ಯ ಸೀಮೆಗೆ ಹೊರಟನು. ವಚನ 39ರಲ್ಲಿ, "ಅವರು ಒಬ್ಬರನ್ನೊಬ್ಬರು ಅಗಲಿದರು, ಮತ್ತು ಬಾರ್ನಬನು ಮಾರ್ಕನನ್ನೂ ತನ್ನೊಂದಿಗೆ ಕರೆದುಕೊಂಡು ಕುಪ್ರಕ್ಕೆ ಪ್ರಯಾಣಿಸಿದನು," ಅಪೊಸ್ತಲರ ಕೃತ್ಯದಲ್ಲಿ ಬಾರ್ನಬನ ಕುರಿತು ಕಡೆಯ ದಾಖಲೆಯು ಇದಾಗಿರುತ್ತದೆ. ನಮ್ಮಲ್ಲಿರುವ ಅನೇಕರ ಹಾಗೆ ಬಾರ್ನಬನು ಸಹ ಕೆಲವು ಬಲಹೀನತೆಯನ್ನು ಹೊಂದಿದ್ದನು ಆದರೆ ಅವನು ಎಂಥಾ ಅದ್ಭುತವಾದ ಕ್ರೈಸ್ತನಾಗಿದ್ದನು! ಈ ದಿನದ ಸಭೆಗಳಿಗೆ ಈ ವಿಧದ ಪ್ರೋತ್ಸಾಹದ ಮಕ್ಕಳ ಅಗತ್ಯವಿದೆ!

"ಪೌಲನು ಸೀಲನನ್ನು ಆರಿಸಿಕೊಂಡು ಸಹೋದರರಿಂದ ಕರ್ತನ ಕೃಪಾಶ್ರಯಕ್ಕೆ ಒಪ್ಪಿಸಲ್ಪಟ್ಟವನಾಗಿ ಹೊರಟು ಸಿರಿಯ ಕಿಲಿಕ್ಯ ಸೀಮೆಗಳಲ್ಲಿ ಸಂಚರಿಸುತ್ತಾ ಸಭೆಗಳನ್ನು ದೃಢಪಡಿಸಿದನು" (ವಚನಗಳು 40:41).

## ಕೆಲವು ನಿರ್ಣಾಯಗಳು

ಪೌಲ ಬಾರ್ನಬರು ಏನನ್ನು ಮಾಡಬೇಕಿತ್ತು ಅಥವಾ ಏನನ್ನು ಮಾಡಬಾರದಿತ್ತು ಎಂಬ

ಸಂಶಯಗಳನ್ನು ಮಾಡುವದು ಸಹಜ. ನಮ್ಮ ಹಿಂದಿನ ಪಾಠಗಳಲ್ಲಿ ನೀಡಲಾಗಿರುವ ಸಲಹೆ ಸೂಚನೆಗಳನ್ನು ಅನುಸರಿಸಿದ್ದರೆ, ಅವರು ತಮ್ಮ ವ್ಯತ್ಯಾಸಗಳನ್ನು ಬಗೆ ಹರಿಸಿಕೊಳ್ಳಬಹುದಿತ್ತು. ನಾವು ಈ ವಿಷಯದಲ್ಲಿ ತೀರ್ಪು ಮಾಡುವಂತೆ, ಲೂಕನು ಯಾವುದೇ ಹೆಚ್ಚಿನ ಮಾಹಿತಿಗಳನ್ನು ನಮಗೆ ನೀಡಿರುವದಿಲ್ಲ. ಆದ್ದರಿಂದ ಸಹೋದರರಲ್ಲಿ ಉಂಟಾಗುವ ವ್ಯತ್ಯಾಸಗಳ ಕುರಿತು ಕೆಲವು ಮಾಹಿತಿಯನ್ನು ಮಾತ್ರ ನಾನು ನೀಡುತ್ತೇನೆ:

(1) *ಸಹೋದರರು ಯಾವಾಗಲೂ ಒಪ್ಪಿಕೊಳ್ಳುತ್ತಿರಲಿಲ್ಲ, ಮುಂದೆಯೂ ಒಪ್ಪುವದಿಲ್ಲ ಇದರಲ್ಲಿ ಒಳ್ಳೆಯವರೂ ಒಳಗೊಂಡಿರುವರು.*[13] ಪೌಲ ಬಾರ್ನಬರು ಉತ್ತಮರಾಗಿದ್ದರೂ ಭಿನ್ನಾಭಿಪ್ರಾಯ ಹೊಂದಿದ್ದರು. ಒಂದು ಹೇಳಿಕೆಯಂತೆ, ಇಬ್ಬರು ಒಂದೇ ಅಭಿಪ್ರಾಯವುಳ್ಳವರಾದರೆ, ಅವರಲ್ಲಿ ಒಬ್ಬನ ಅಗತ್ಯತೆ ಇರುವದಿಲ್ಲ. ಭಿನ್ನಾಭಿಪ್ರಾಯಗಳು ಅತಿರೇಖಕ್ಕೆ ಹೋಗದೆ ಇದ್ದರೆ, ಅದರಲ್ಲಿ ಯಾವ ತಪ್ಪು ಇರುವದಿಲ್ಲ. (ಪೌಲ ಬಾರ್ನಬರಲ್ಲಿ ಉಂಟಾದ "ತೀಕ್ಷ್ಣ ವಿವಾದವನ್ನು" ನಾವುಗಳು ಅನುಮೋದನೆ ಮಾಡುವದಿಲ್ಲ) ಭಿನ್ನಾಭಿಪ್ರಾಯಗಳು ನ್ಯಾಯವಾದ ನಿರ್ಣಯಕ್ಕೆ ಒಳಪಟ್ಟಿರುತ್ತದೆ.[14]

(2) *ಅನೇಕ ಭಿನ್ನಾಭಿಪ್ರಾಯಗಳಲ್ಲಿ, ತಪ್ಪಾದ ಹಾಗೂ ಸರಿಯಾದ ಅಭಿಪ್ರಾಯಗಳ ಎರಡೂ ಗುಂಪಿನವರು ಇರುತ್ತಾರೆ.* ಪೌಲ ಬಾರ್ನಬರ ಚರಿತ್ರೆಯನ್ನು ಓದುವಾಗ, ಅವರಲ್ಲಿದ್ದ ಭಿನ್ನಾಭಿಪ್ರಾಯಗಳ ಕುರಿತು, "ಅವರಲ್ಲಿ ಸರಿಯಾದ ಹಾಗೂ ತಪ್ಪಾದ ಅಭಿಪ್ರಾಯ ಹೊಂದಿದವರು ಯಾರು ಎಂಬ ಪ್ರಶ್ನೆ ಕೇಳುತ್ತೇವೆ?" ಒಬ್ಬನು ಹೇಳುವಂತೆ, ಪೌಲನು ಸರಿಯಾದ ಅಭಿಪ್ರಾಯ ಹೊಂದಿದ್ದನು. ನಾನೂ ಸಹ ಅವನ ಸ್ಥಾನದಲ್ಲಿ ಇದ್ದವನೇ - ಮುರಿದ ಹುಲ್ಲಿನ ಮೇಲೆ ಅವಲಂಭನೆ ಮಾಡಲು ಕಷ್ಟ ಎಂದು ನಾನು ಹೇಳುತ್ತೇನೆ! ಇದಕ್ಕೆ ಇನ್ನೊಬ್ಬನ್ನು ಉತ್ತರಿಸಿ, "ಇಲ್ಲ ಬಾರ್ನಬನು ಸರಿಯಾದ ಅಭಿಪ್ರಾಯವನ್ನು ಹೊಂದಿದ್ದನು - ಯಾಕಂದರೆ ಮಾರ್ಕನು ಕರ್ತನಿಗಾಗಿ ಉತ್ತಮಸೇವೆ ಮಾಡಿದ್ದನು!" ಲೂಕನು ಯಾರು ಸರಿ, ಅಥವಾ ಯಾರು ತಪ್ಪು ಎಂದು ತಿಳಿಸಿರುವದಿಲ್ಲ. ಅಂತಿಯೋಕ್ಯದ ಸಹೋದರರು ಪೌಲ ಸೀಲರಿಗೆ ನೀಡಿದ ಬಿಳ್ಕೊಡುಗೆಯನ್ನು ಗಮನಿಸುವುದಾದರೆ (ವಚನ 40), ಅವರು ಪೌಲನ ಪರವಾಗಿದ್ದರು ಎಂದು ತೋಚುತ್ತದೆ (ಅವನ ಸ್ಥಾನವನ್ನು ಅವರು ಪ್ರಶ್ನಿಸಿರಲಿಲ್ಲ), ಆದರೆ ಅದು ನಿರ್ಣಾಯಕವಲ್ಲ.

ಅವರು ಕೋಪಗೊಂಡಿದ್ದರಿಂದ, ಅವರ ಭಿನ್ನಾಭಿಪ್ರಾಯಗಳು ತಪ್ಪಾಗಿದ್ದವು. ಇನ್ನೊಂದು ಅರ್ಥದಲ್ಲಿ ಅವರಿಬ್ಬರ ಅಭಿಪ್ರಾಯವೂ ಸರಿಯಾಗಿತ್ತು: ಯಾಕಂದರೆ ಅವರಿಬ್ಬರು ವಿವಿಧ ದೃಷ್ಟಿಕೋನದಿಂದ ಸಂಗತಿಗಳನ್ನು ದೃಷ್ಟಿಸಿದ್ದರು. ಸೇವಾ ದೃಷ್ಟಿಯಿಂದ ಮಾರ್ಕನ ವಿಷಯವನ್ನೂ ಪೌಲನು ಪ್ರಸ್ತಾಪಿಸಿದನು;[15] ಬಾರ್ನಬನು ಮನುಷ್ಯನ ದೃಷ್ಟಿಯಿಂದ ಅವಲೋಕಿಸಿದನು. ಮಾರ್ಕನನ್ನು ಕರಕೊಂಡು ಹೋಗುವದರಿಂದ ಅವರ ಇತರೆ ಸಂಗಡಿಗರಲ್ಲಿ ಗೊಂದಲ ಉಂಟಾಗಿ, ಸೇವೆಗೆ ಅಡ್ಡಿಯಾಗಬಹುದೆಂದು ಪೌಲನು ತಿಳಿದಿದ್ದನು. "ಪೌಲನು ಜನರನ್ನು ನೋಡಿ, ಅವರು ದೇವರ ಕಾರ್ಯಕ್ಕಾಗಿ ಏನು ಮಾಡಬಹುದು? ಎಂದು ಕೇಳಿದನು, ಆಗ ಬಾರ್ನಬನು ಜನರನ್ನು ನೋಡಿ, ದೇವರ ಕೆಲಸವು ಅವರಿಗೆ ಏನು ಮಾಡಬಹುದು?"[16] ಎಂದು ಕೇಳಿದನು ದೇವರ ಸೇವೆಯಲ್ಲಿ ಇವೆರಡರ ಅಗತ್ಯವು ಇದೆ.

ಅಮೆರಿಕೆಯಲ್ಲಿರುವ, ಒಂದು ನಿಯಮದಂತೆ "ಇಬ್ಬರು ಭಿನ್ನಾಭಿಪ್ರಾಯ ಪಡುವಾಗ, ಇಬ್ಬರಲ್ಲೂ ನ್ಯಾಯವಿರುವದಿಲ್ಲ. ಒಬ್ಬನು ಸರಿಯಾಗಿಯೂ ಮತ್ತೊಬ್ಬನು ತಪ್ಪಾಗಿಯೂ ಇರಬಹುದು. ಅಥವಾ ಇಬ್ಬರಲ್ಲೂ ತಪ್ಪಿರಬಹುದು, ಇಬ್ಬರಲ್ಲಿ ಸರಿ ಇಲ್ಲದೆ ಇರಬಹುದು." ವಾಕ್ಯದ ಪ್ರಕಾರ ಸರಿಯಿದ್ದರೂ, ನಿರ್ಣಯಗಳನ್ನು ಮಾಡುವಾಗ, ಅವೆರಡು ಸತ್ಯ ಸಂಗತಿಯಾಗಿರುವದಿಲ್ಲ. ಇತರರ ಭಿನ್ನಾಭಿಪ್ರಾಯಗಳನ್ನು ಒಪ್ಪಿಕೊಳ್ಳುವಾಗ ವೈಯಕ್ತಿಕವಾದ ಸಂಬಂಧವು ವೃದ್ಧಿಗೊಳ್ಳುತ್ತದೆ. ಇತರರು ಹೇಳುವದು ಸರಿ (ಸಂದೇಹವಿದ್ದರೂ) ಎಂದು ಹೇಳುವ ಸಾಧ್ಯತೆಯಿದೆ![17]

(3) *ಕೆಲವು ಸಾರಿ ಎಷ್ಟೇ ಪ್ರಯತ್ನ ಮಾಡಿದರೂ, ಒಪ್ಪಂದವು ಅಸಾಧ್ಯವಾಗುತ್ತದೆ, ಆಗ ಸಹೋದರರು "ಒಪ್ಪದೆ ಇರುವದನ್ನು ಸರಳವಾಗಿ ಒಪ್ಪಿಕೊಳ್ಳಬೇಕಾಗುತ್ತದೆ."* ಆದಾಗ್ಯೂ ಇದು ಸತ್ಯವಾಗದೆ ಇರುವದರಿಂದ, ಒಪ್ಪಿಗೆ ನೀಡಬೇಕಾಗುತ್ತದೆ, ಈ ಸಂಗತಿಯು ನಡೆಯುವಾಗ, ಲೋಕದಲ್ಲಿ ಅಘಾತವಾಗುತ್ತವೆ ಆದರೆ ಸ್ನೇಹದ ಅಂತ್ಯವಲ್ಲ.

(4) *ಸಹೋದರರು ಒಪ್ಪದೆ ಇದ್ದರೂ - ಅವರು ಕ್ರೈಸ್ತರ ವರ್ತನೆಯನ್ನೇ ಮುಂದುವರಿಸಬೇಕು.* ದೃಢ ಚಿತ್ತರಾದ ಸಹೋದರರು ವ್ಯತ್ಯಾಸಗಳನ್ನು ಬಗೆ ಹರಿಸುವಾಗ, ಪೌಲನು ಎಫೆಸದವರಿಗೆ ಬರೆದ ವಾಕ್ಯವನ್ನು ಓದುವದು ಅಗತ್ಯವಿದೆ:

> ಕೋಪಮಾಡಬೇಕಾದರೂ ಪಾಪಮಾಡಬೇಡಿರಿ; ಸೂರ್ಯನು ಮುಳುಗುವದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ ... ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತೂ ಹೊರಡಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ ... ಎಲ್ಲಾ ದ್ವೇಷ ಕೋಪ ಕ್ರೋಧ ಕಲಹ ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರ ಮಾಡಿರಿ ... ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ (ಎಫೆಸ 4:26, 29, 31, 32; NCV).

ಒಬ್ಬರು ಹೇಳಿರುವ ಹಾಗೆ, "ನೀನು ಸಮ್ಮತಿಸದೆ ಹೋದರೂ, ಅಪ್ರಿಯವಾಗಿರಬೇಡ."

ಭಿನ್ನಾಭಿಪ್ರಾಯವಾದಾಗ ಪೌಲ ಬಾರ್ನಬರು ಯಾವ ರೀತಿ ವರ್ತಿಸಿದರು? ಮೊದಲನೆಯದಾಗಿ, ಅವರು ದೇವರ ಸೇವೆಯನ್ನು ಮೊಟಕು ಮಾಡಲಿಲ್ಲ. ಆಗಾಗ್ಗೆ ಒಬ್ಬ ಸಹೋದರ, ಇನ್ನೊಬ್ಬ ಸಹೋದರನ ಮೇಲೆ ಕೋಪಗೊಳ್ಳುವಾಗ ಕರ್ತನ ಮೇಲೆ ಹಾಕುತ್ತಾರೆ ಎರಡನೆಯದಾಗಿ, ಅವರಿಬ್ಬರು ಪರಸ್ಪರ ಸಾಕ್ಷಿಯನ್ನು ಹಾಳುಮಾಡಲಿಲ್ಲ. ಬಾರ್ನಬನ ಸ್ವಸ್ಥ ಬುದ್ಧಿಯ ಬಗ್ಗೆ ಸಂಶಯಪಟ್ಟು, ಪೌಲನು ಪತ್ರಗಳನ್ನು ಬರೆಯಲಿಲ್ಲ. ಅಥವಾ ಪೌಲನು ಅನುಕಂಪವನ್ನು ಕಳೆದುಕೊಂಡಿರುವನೆಂದು ಬಾರ್ನಬನು *ಕುಪ್ರದ ಮಾಹಿತಿ* ಯೆಂಬ ವರ್ತಮಾನ ಪತ್ರಿಕೆಯನ್ನು ಕಳುಹಿಸಲಿಲ್ಲ. ಮೂರನೆಯದಾಗಿ, ಅವರು ಪರಸ್ಪರ ಹೊಟ್ಟೆಕಿಚ್ಚು ಪಡಲಿಲ್ಲ. ಅವರು ಈ ಕಾರ್ಯಗಳನ್ನು ಮಾಡದೆ ಇದ್ದಾಗ, ಆ ವಿಷಯವು ತನಗೆ ತಾನೇ ಸಮಾಧಾನಗೊಂಡಿತು. ನಂತರ, ಪೌಲನು ಕೊರಿಂಥದವರಿಗೆ ಬರೆಯುವಾಗ, ಬಾರ್ನಬನ ಕುರಿತು (1 ಕೊರಿಂಥ 9:6). ಅಲ್ಲಿ ಪೌಲನು ಅವನ ಮೇಲೆ ಬೇಸರ ಗೊಂಡಿದ್ದನು ಎಂಬ ಹೇಳಿಕೆ ನೀಡಿರುವದಿಲ್ಲ; ಅವರು ಪುನಃ ಒಂದಾಗಿ ಕಾರ್ಯ ನಿರ್ವಹಿಸಿರಬಹುದು ಎಂಬ ಸೂಚನೆಯಿದೆ.[18] ನಾವು ಸಹೋದರರಲ್ಲಿ ಭಿನ್ನಾಭಿಪ್ರಾಯ ಹೊಂದುವಾಗ, ಪೌಲ ಬಾರ್ನಬರಿಂದ ಪಾಠವನ್ನು ಕಲಿಯುವಂತೆ ದೇವರು ನಮಗೆ ಸಹಾಯಿಸಲಿ!

(5) *ನಾವು ಉತ್ತಮವಾದ ಕ್ರೈಸ್ತರಾಗಿದ್ದರೆ ದೇವರು ನಮ್ಮ ಬಲಹೀನತೆಗಳಿಗೆ ಜಯವನ್ನು ನೀಡಿ, ಭಿನ್ನಾಭಿಪ್ರಾಯಗಳಿಂದಲೇ, ನಮ್ಮನ್ನು ಆಶೀರ್ವದಿಸಲು ಸಾಧ್ಯವಿದೆ.* ಪೌಲ ಬಾರ್ನಬರಲ್ಲಿ ಉಂಟಾದ ಭಿನ್ನಾಭಿಪ್ರಾಯದ ನಿಮಿತ್ತ ಒಂದು ತಂಡದ ಬದಲು, ಎರಡು ತಂಡಗಳು ಸೇವೆಗಾಗಿ ಹೊರಟರು. ಈ ಎರಡು ತಂಡಗಳನ್ನು ಮಾಡುವದಕ್ಕಾಗಿ ಪರಿಶುದ್ಧಾತ್ಮನು ಈ ಕಾರ್ಯವನ್ನು ಗೌಪ್ಯವಾಗಿ ಮಾಡಿರ ಬಹುದು, ಆದರೆ ದೇವರೇ ಈ ಭಿನ್ನಾಭಿಪ್ರಾಯಗಳನ್ನು ಉಂಟುಮಾಡಿದನು ಎಂದು ಅಭಿಪ್ರಾಯ ಪಡಬಾರದು (ರೋಮಾಪುರ 8:28). ಸೇವಾ ಸ್ಥಳದಲ್ಲಿ, ಪೌಲ ಬಾರ್ನಬರಲ್ಲಿ ಉಂಟಾದ ಸಂಗತಿಗಳನ್ನು ನಾನು ನೋಡಿರುವೆನು. ಇಬ್ಬರು ಒಂದಾಗಿ ಸೇವೆ ಮಾಡಲು ಅಸಾಧ್ಯ ಆದ್ದರಿಂದ ಅವರು ಬೇರೇ ಸ್ಥಳಗಳಲ್ಲಿ ಕೆಲಸಮಾಡಲು ಒಪ್ಪಿಕೊಳ್ಳುತ್ತಾರೆ. ಅನೇಕ ಸಾರಿ ಪ್ರತ್ಯೇಕಗೊಳ್ಳುವದು, ಹಿತಕರವಾಗಿದ್ದು, ಅದರ ಪರಿಣಾಮವಾಗಿ, ಒಂದರ ಬದಲು ಎರಡು ಸಭೆಗಳಾಗಿ - ಪರಸ್ಪರ ಅನ್ಯೋನ್ಯತೆಯುಳ್ಳ ಸಭೆಗಳಾಗುತ್ತವೆ.

ಅವರಿಬ್ಬರಲ್ಲಿ ಒಡಕು ಉಂಟಾಗಿದ್ದರೂ, ಸೇವೆಯಲ್ಲಿ ಮಾತ್ರ ಮುಂದುವರಿದರು, ಅದರ ಪರಿಣಾಮವಾಗಿ, ಉತ್ತಮವಾದ ಸೇವೆಗೆ ನಾಂದಿ ಉಂಟಾಯಿತು. ಅವರಿಬ್ಬರೂ ದೇವರಿಂದ ಆಶೀರ್ವದಿಸಲ್ಪಟ್ಟರು. ಮುಂದಿನ ಪಾಠಗಳಲ್ಲಿ ಪೌಲನ ಎರಡನೆಯ ಸೇವಾ ಪ್ರಯಾಣದ ಕುರಿತು ಅಧ್ಯಯನ ಮಾಡುತ್ತೇವೆ. ಪೌಲನಿಗೂ, ಅವನ ಹೊಸ ತಂಡಕ್ಕೂ ಫಲಪ್ರದವಾದ ಸೇವೆಯು ಉಂಟಾಯಿತು. ಅದೇ ಸಮಯದಲ್ಲಿ ಬಾರ್ನಬನು ಮಾರ್ಕನಿಗೆ ಉತ್ತೇಜನ ನೀಡುವುದರ ಮೂಲಕ ನಂಬಲಾರದ ಯಶಸ್ವಿ ಅವನಿಗೆ ಉಂಟಾಯಿತು. ಪ್ರೇರಣೆಗೊಳ್ಳದ ಸಂಪ್ರದಾಯದಂತೆ, ಮಾರ್ಕನು ಐಗುಪ್ತದ ಅಲೆಕ್ಸಾಂಡ್ರಿಯಕ್ಕೆ ಹೋಗಿ ಸೇವೆಯನ್ನು ಸ್ಥಾಪಿಸಿದನು. ಅವರಲ್ಲಿ ಸಂಶಯವಿದ್ದರೂ, ಮಾರ್ಕನು, ಪೇತ್ರನ ಜೊತೆ ಕೆಲಸದವನಾದನು ಎಂದು ನೋಡುತ್ತೇವೆ (1 ಪೇತ್ರನು 5:13). ಮತ್ತು ಅವನು ಮಾರ್ಕನ ಸುವಾರ್ತೆಯನ್ನು ಬರೆದನು. ಒಂದು ವೇಳೆ ಅವನು ಪೌಲನೊಂದಿಗೆ ಒಂದಾಗಿರಬಹುದು: ಪೌಲನು ಸೆರೆಮನೆಗೆ ಹಾಕಲ್ಪಟ್ಟಾಗ, ಮಾರ್ಕನೂ ಸಹ ಅವನೊಂದಿಗಿದ್ದನು. ಒಂದು ವೇಳೆ ಪೌಲನಿಗೂ ಅವನು ಜೊತೆಕೆಲಸದವನಾಗಿರಬಹುದು. ಮಾರ್ಕನು "ಉತ್ತೇಜನ ಕಾರಿಯಾಗಿದ್ದನು ಎಂದು ಗಮನಿಸುತ್ತೇವೆ" (ಕೊಲೋಸ್ಸೆ 4:10, 11; ಹಾಗೆಯೇ ಫಿಲೋಮೋನ 24ನ್ನು ಸಹ ನೋಡಿರಿ). ಹೇಗೂ ಪೌಲನು ತಿಮೊಥೆಗೆ ಬರೆದು ಮನವಿ ಮಾಡುವಾಗ, ಪೌಲನು ಎರಡನೆಯ ಸಾರಿ ಸೆರೆಮನೆಗೆ ಹಾಕಲ್ಪಟ್ಟಾಗ, ಅಥವಾ ಅವನ ಮರಣದ ಮೊದಲು: "ಮಾರ್ಕನನ್ನು ಸಂಗಡ ಕರಕೊಂಡು ಬಾ, ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ" (2 ತಿಮೊಥೆ 4:11). ಒಂದು ಕಾಲದಲ್ಲಿ ಪೌಲನು, ಮಾರ್ಕನನ್ನು ಕುರಿತು ಅವನು ಪ್ರಯೋಜನಕ್ಕೆ ಉಪಯೋಗವಿಲ್ಲದವನು ಎಂದು ಹೇಳಿದ್ದನು; ಅಂತ್ಯದಲ್ಲಿ ಅವನನ್ನು ಉಪಯುಕ್ತನೆಂದು ಕಂಡುಕೊಂಡನು. (ದೇವರು ಅಪರಿಪೂರ್ಣರನ್ನು ಸಹ ಉಪಯೋಗಿಸುವನಲ್ಲವೇ?)

## ಮುಕ್ತಾಯ

ಅನೇಕ ದಿವಸಗಳಿಂದ ಭಿನ್ನಾಭಿಪ್ರಾಯ ಹೊಂದಿದ್ದ ಇಬ್ಬರು ಸಹೋದರಿಯರ ಬಗ್ಗೆ ನಾನು ಕೇಳಲ್ಪಟ್ಟೆನು (ಅದೇನೆಂದು ನನಗೆ ನೆನಪಿರುವದಿಲ್ಲ). ಅವರು ಒಂದೇ ಮನೆಯಲ್ಲಿ ವಾಸವಾಗಿದ್ದರೂ, ಅನೇಕ ವರ್ಷಗಳ ಕಾಲ ಪರಸ್ಪರ ಮಾತಾಡುತ್ತಿರಲಿಲ್ಲ. ಅವರ ಮನೆಯನ್ನು ವಿಭಾಗಿಸುವಂತೆ, ಸೀಮೆಸುಣ್ಣದ ಗುರುತನ್ನು ಹಾಕಿಕೊಂಡಿದ್ದರು, ಅಡಿಗೆ ಮಾಡುವ ಸ್ಥಳದಲ್ಲೂ ಗುರುತ್ತು ಮಾಡಿಕೊಂಡಿದ್ದರು. ಒಂದೇ ಅಡಿಗೆ ಮನೆಯಲ್ಲಿ ಅಡಿಗೆ ಮಾಡಿದರು. ಒಂದೇ ಮೇಜಿನಲ್ಲಿ ಊಟಮಾಡಿದರು, ಒಂದೇ ಮಲಗುವ ಕೋಣೆಯಲ್ಲಿ ಮಲಗಿದರು, ಮಲಗುವಾಗ ಅವರ ಉಸಿರಾಟದ ಶಬ್ಧವನ್ನು ಆಲಿಸಿದರೂ, ಪರಸ್ಪರ ಸಂಪರ್ಕವು ಕಡಿದು ಹೋಗಿತ್ತು.

ಎಂಥಾ ದುಃಖದ ಸಂಗತಿ ಎಂದು ನೀವು ತಿಳಿಯಬಹುದು, ಆದರೆ ಪ್ರಪಂಚದ ಕುಟುಂಬಗಳಲ್ಲಿ, ಸಮುದಾಯಗಳಲ್ಲಿ, ಸಭೆಗಳಲ್ಲಿ, ಜನರು ಸೀಮೆಸುಣ್ಣದಿಂದ, ಮಧ್ಯಭಾಗವನ್ನು ಗುರುತು ಮಾಡಿ ವಿಭಾಗ ಮಾಡಿರುವರು. ನಾನು ಕಣ್ಣಿಗೆ ಕಾಣುವ ಸೀಮೇ ಸುಣ್ಣದ ಗುರುತಿನ ಬಗ್ಗೆ ಮಾತನಾಡದೇ ಭಿನ್ನಾಭಿಪ್ರಾಯದ ದೆಸೆಯಿಂದ ಪರಸ್ಪರರೊಂದಿಗೆ ಸಂಪರ್ಕ ಕಳಕೊಂಡಿರುವವರ ಬಗ್ಗೆ ಮಾತನಾಡುತ್ತಿರುವೆನು - ನಾವುಗಳು ಇಂಥಾ ಪರಿಸ್ಥಿತಿಯಲ್ಲಿದ್ದರೆ, ನಿಮಗೆ ನನ್ನ ವಿನಂತಿ ಏನೆಂದರೆ, "ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ" (ರೋಮಾಪುರ 12:18; NCV).

ನಾವು ಇದನ್ನು ವೈಯಕ್ತಿಕ ಪತ್ರವೆಂದು ತಿಳಿಯೋಣ: ನೀವು ಯಾರೊಂದಿಗಾದರೂ ತೀಕ್ಷ್ಣವಾದ ಭಿನ್ನಾಭಿಪ್ರಾಯವನ್ನು ಹೊಂದಿರುವಿರಾ? ಹೊಂದಿದ್ದರೆ ನಿಮ್ಮ ಪ್ರತಿಕ್ರಿಯೆ ಏನು? ಅವನು ಅಥವಾ (ಆಕೆ) ಯಾವ ರೀತಿ ಪ್ರತಿಕ್ರಿಯಿಸುವನು ಎಂದು ನಾನು ಹೇಳಿದೆ, ಹಾಗೆಯೇ ನಿನ್ನ ಪ್ರತಿಕ್ರಿಯೆ ಏನು? ಅಪಾರ್ಥಗಳನ್ನು ಸರಿಪಡಿಸಲು "*ನಿನ್ನ ಪ್ರತಿಕ್ರಿಯೆ ಏನು?*" ಈಗ ನೀನು ಒಬ್ಬ ಸಹೋದರ ನೊಂದಿಗೆ ಭಿನ್ನಾಭಿಪ್ರಾಯವನ್ನು ಹೊಂದಿದ್ದರೆ, ಅದಕ್ಕಾಗಿ ಪ್ರಾರ್ಥಿಸಲು

ದೇವರೊಂದಿಗೆ ನಿನ್ನ ಪಾಪವನ್ನು ಅರಿಕೆ ಮಾಡು, ಸಮಸ್ಯೆ ಪರಿಹಾರ ಮಾಡಿಕೊಳ್ಳುವ ಜ್ಞಾನವನ್ನು ದೇವರಿಂದ ಬೇಡಿಕೋ ಆ ಸಹೋದರರನೊಂದಿಗೆ, ಒಳ್ಳೆ ಮನೋಭಾವವನ್ನು ಬೆಳಸಿಕೊಳ್ಳುವಂತೆ ಬೇಡಿಕೊ.[19]

## ಪ್ರಸಂಗದ ಟಿಪ್ಪಣಿ

"ಸುಣ್ಣದ ಗುರುತುಗಳನ್ನು ತೆಗೆದು ಹಾಕು" ಎಂಬ ತಲೆಬರಹವನ್ನು ಮಾಡಬಹುದು! ಸುಣ್ಣದ ಗುರುತನ್ನು ಮಾಡಿಕೊಂಡ. ಸಹೋದರಿಯರ ನಿದರ್ಶನದ ಮುನ್ನಡಿಯನ್ನು ನೀಡಬಹುದು. ಪಾಠವನ್ನು ಎರಡು ಭಾಗವಾನ್ನಾಗಿ ಮಾಡಿರಿ: (1) "ಸುಣ್ಣದ ಗುರುತನ್ನು ಹಾಕುವದು" (15:35-39ಎ) ಮತ್ತು (2) "ಸುಣ್ಣದ ಗುರುತನ್ನು ಅಳಿಸುವದು" (15:39ಬಿ-41). ಮೊದಲ ತಲೆಬರಹದಲ್ಲಿ "ಕೆಲವು ನಿರ್ಣಯಗಳು" (ನೋಡಿರಿ ಪುಟ 35) ಎಂಬದನ್ನು ಎರಡನೆಯ ತಲೆಬರಹದಲ್ಲಿ, ಆ ಭಾಗದಲ್ಲಿರವ ಇತರ ಸಂಗತಿಗಳನ್ನು ಉಪಯೋಗಿಸಿರಿ.

---

ಟಿಪ್ಪಣಿಗಳು

[1]ಲೂಕನು ಅಪೊಸ್ತಲರ ಕೃತ್ಯವನ್ನು ಬರೆಯುವ ಕಾಲದಲ್ಲಿ ಬಾರ್ನಬನು ಇನ್ನೂ ಜೀವಂತವಾಗಿರಬಹುದು. ಪೌಲನು ನಿಶ್ಚಯವಾಗಿಯೂ ಇದ್ದನು. [2]ಗಲಾತ್ಯದ ಕುರಿತ "ಸ್ಟಾಂಡರ್ಟ್ ಕಾಮೆಂಟರಿಯನ್ನು ನೋಡಿರಿ." [3]ಚಳಿಗಾಲದಲ್ಲಿ ಪೌಲ ಬಾರ್ನಬರು ಸೇವೆ ಮಾಡಿದರು, ಪ್ರಯಾಣವು ಕಷ್ಟಕರವಾಗಿದ್ದಾಗ, ಬೇಸಿಗೆಯಲ್ಲಿ ಪ್ರಯಾಣದ ಕುರಿತು ನಿರ್ಧಾರ ಮಾಡಿದರು, ಪೌಲನ ನಿರ್ಯದಲ್ಲಿ ಪರಿಶುದ್ಧಾತ್ಮನ ಕಾರ್ಯವು ಅಡಗಿತ್ತು. [4]ಈ ಪುಸ್ತಕದಲ್ಲಿರುವ "ದೇವರು ಮಾಡಿರುವ ಸಕಲ ಕಾರ್ಯಗಳು" ಎಂಬ ಪಾಠದಲ್ಲಿದೆ. [5]ಅವರ ಕ್ರಿಯೆಯು ಮುಂದುವರಿಯಿತು ಎಂದು ಮೂಲ ಭಾಷೆಯಲ್ಲಿ ಸೂಚಿಸಿದೆ NASB. [6]This idea was suggested by an imagined exchange by Rick Atchley, "When Brothers Get Off the Mark," Sermon preached at the Southern Hills chruch of Christ, Abilene, Texas, on 4 May 1986. [7]ಅಧ್ಯಾಯ ಮತ್ತು ವಚನವನ್ನು ತಿಳಿಸಿರುವದಿಲ್ಲ, ಅವರ ದಿವಸಗಳಲ್ಲಿ, ಈ ಬಗ್ಗೆ ವಿಭಾಗಗಳಿರಲಿಲ್ಲ. [8]ಆ ದಿವಸಗಳಲ್ಲಿ ಹಳೇ ಒಡಂಬಡಿಕೆಯ ಬರವಣಿಗೆ ಮಾತ್ರವಿತ್ತು. [9]ಅಪೊಸ್ತಲರ ಕೃತ್ಯಗಳು 9:26, 27. [10]J. B. Rotherham, The Emphasized New Testament: A New Translation.

[11]J. B. Phillips, The New Testament in Modern English. [12]ಕುಪ್ರದಲ್ಲಿ ಸಭೆಗಳನ್ನು ಪೌಲ ಬಾರ್ನಬರು ಸ್ಥಾಪಿಸಿದ್ದರೂ, 13:6ರಲ್ಲಿ ನೋಡುವಂತೆ ಲೂಕನು ಅದನ್ನು ದಾಖಲು ಮಾಡಿರುವದಿಲ್ಲ, ಬಹುಶಃ ಬಾರ್ನಬನು ಆ ಕೆಲಸವನ್ನು ಮುಂದುವರಿಸಲು ಹೋಗಿರಬಹುದು. [13]ಎರಡು ಛಲವುಳ್ಳ ಜನರು ಒಟ್ಟಾಗಿರುವಾಗ, ಭಿನ್ನಾಭಿಪ್ರಾಯಗಳು ಉದ್ಭವಿಸುತ್ತವೆ (ನಾನು ನಿಮ್ಮನ್ನು ಅಘಾತಗೊಳಿಸುವದಿಲ್ಲ) ಪ್ರಸಂಗಿಗಳಲ್ಲೂ ಈ ಸಂಗತಿ ಅಡಗಿರುತ್ತವೆ, ಅವರಲ್ಲಿ ದೃಢವಾದ ಮನಸ್ಸಿನಲ್ಲಿದವರು, ಹಾದಿತಪ್ಪಿ ಸೇವೆಯನ್ನು ಮೊಟಕು ಮಾಡುತ್ತಾರೆ. [14]ನಾವು ಮೂಲ ಸಿದ್ಧಾಂತಗಳನ್ನು ಒಪ್ಪಿಕೊಳ್ಳಬೇಕು (1 ಕೊರಿಂಥ 1:10) ಸಕಲ ನಿರ್ಣಯಗಳನ್ನು ನಾವು ಒಪ್ಪಿಕೊಳ್ಳಬೇಕು ಎಂಬುದಾಗಿರುವದಿಲ್ಲ (ರೋಮಾಪುರ 14). [15]ಕೆಲಸವು ಸರಳವಾಗಿರದೆ (ಗಲಾತ್ಯದ ಸುಳ್ಳುಪ್ರವಾದಿಗಳನ್ನು ಎದುರಿಸುವದು, ಮತ್ತು ದೇವರ ಕಾರ್ಯವನ್ನು ಮಾಡುವದು) ಮತ್ತು ಮಾರ್ಕನು ಹಿಂದಿರುಗಬಹುದೆಂದು ಪೌಲನು ತಿಳಿದಿರಬಹುದು. [16]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 466. [17]ಇದರಲ್ಲಿ ಮದುವೆ ಸಂಬಂಧಗಳು ಒಳಗೊಂಡಿವೆ. [18]ಎರಡನೆ ಸೇವಾ ಪ್ರಯಾಣದ ಅಂತ್ಯದಲ್ಲಿ ಬಾರ್ನಬರು ಪೌಲನ ಬಳಿ ಸೇರಿರಬಹುದು (ಅಪೊಸ್ತಲರ ಕೃತ್ಯಗಳು 18). ಅದು ಇರಬಹುದು. ಅವನು ಕೊರಿಂಥದಲ್ಲಿ ಕೆಲವು ಕಾಲ ಸೇವೆ ಮಾಡಿ; ಬಾರ್ನಬನು ಹಣ ತೆಗೆದುಕೊಳ್ಳಲಿಲ್ಲ ಎಂಬ ಅಂಶವಿಲ್ಲ. [19]ಈ ಪ್ರಸಂಗದ ಮೊದಲ ಪ್ರಾರ್ಥನೆಯನ್ನು ಮಾಡಬಹುದು. ನಮ್ಮ ಸಂಬಂಧವು ಇತರರೊಂದಿಗೆ ಸರಿಯಾಗಿರದಿದ್ದರೆ, ಅದನ್ನು ಮಾಡಲು ಪರಿಹರಿಸಿಕೊಳ್ಳಬೇಕು.